# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 267
2) ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 14-09-2022
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚು ಮಾಡಲು ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳೇನು;</td><td>ರಾಜ್ಯದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚು ಮಾಡಲು ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಕಳೆದ ಮೂರು ವರ್ಷಗಳ ಅವಧಿಗೆ ಎಷ್ಟು ಲಕ್ಷ ಮೀನು ಉತ್ಪಾದನೆಯಾಗಿದೆ; ಪ್ರಸ್ತುತ ದೇಶದಲ್ಲಿ ರಾಜ್ಯವು ಮೀನು ಉತ್ಪಾದನೆಯಲ್ಲಿ ಯಾವ ಸ್ಥಾನದಲ್ಲಿ ಇದೆ;</td><td>ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೀನು ಉತ್ಪಾದನೆ ವಿವರ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಮೀನು ಉತ್ಪಾದನೆ (ಮೆಟ್ರಿಕ್ ಟನ್ ಗಳಲ್ಲಿ)</th></tr>
<tr><td>2019-20</td><td>632001</td></tr>
<tr><td>2020-21</td><td>598945</td></tr>
<tr><td>2021-22</td><td>1073746</td></tr>
<tr><td>ಒಟ್ಟು</td><td>2304692</td></tr>
</table>
ಪ್ರಸ್ತುತ ಮೀನು ಉತ್ಪಾದನೆಯಲ್ಲಿ ರಾಜ್ಯವು 3ನೇ ಸ್ಥಾನದಲ್ಲಿದೆ.</td></tr>
<tr><td>ಇ)</td><td>ಕರ್ನಾಟಕದಿಂದ ಎಷ್ಟು ಟನ್ ಮೀನು ರಫ್ತು ಮಾಡಲಾಗುತ್ತಿದೆ? (ಸಂಪೂರ್ಣ ಮಾಹಿತಿಯನ್ನು ನೀಡುವುದು)</td><td>ಕರ್ನಾಟಕದಿಂದ ರಫ್ತು ಮಾಡಲಾದ ಮೀನುಗಳ ಸಂಪೂರ್ಣ ಮಾಹಿತಿ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಮೀನು ರಫ್ತು (ಮೆಟ್ರಿಕ್ ಟನ್ ಗಳಲ್ಲಿ)</th></tr>
<tr><td>2019-20</td><td>95941</td></tr>
<tr><td>2020-21</td><td>105453</td></tr>
<tr><td>2021-22</td><td>120487</td></tr>
<tr><td>ಒಟ್ಟು</td><td>321881</td></tr>
</table></td></tr>
</table>

ಸಂಖ್ಯೆ: ಪಸಂಮೀ ಇ-193 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 267 ಕ್ಕೆ**

**ಅನುಬಂಧ 01**

1. ಖಾಸಗಿ ಕೊಳಗಳಲ್ಲಿ ಮೀನು ಸಾಕಣೆ ಹೆಚ್ಚಳ:- PMMSY ಯೋಜನೆಯಡಿಯಲ್ಲಿ ಸುಮಾರು 1000 ಹೆಕ್ಟೇರ್ ಹೊಸ ಮೀನು ಕೊಳಗಳನ್ನು ನಿರ್ಮಿಸಲಾಗಿದೆ ಮತ್ತು ಈ ಕೊಳಗಳಲ್ಲಿ ಮೀನು ಕೃಷಿಯನ್ನು ಕೈಗೊಳ್ಳಲಾಗಿದೆ.
2. ಕೆರೆ/ಜಲಾಶಯಗಳ ಅಂಚಿನಲ್ಲಿ ಮೀನುಮರಿ ಸಾಕಣೆ ಚಟುವಟಿಕೆಯನ್ನು ಕೈಗೊಳ್ಳಲು ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಸಹಾಯಧನವನ್ನು ನೀಡಲಾಗುತ್ತಿದೆ.
3. ಮೀನುಗಾರರ ಸಹಕಾರ ಸಂಘಗಳು ಗುತ್ತಿಗೆ ಪಡೆದ ಕೆರೆಗಳಿಗೆ ಉಚಿತ ಬಲಿತ ಮೀನುಮರಿಗಳನ್ನು ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ ಕಾರ್ಯಕ್ರಮದಡಿ ದಾಸ್ತಾನು ಮಾಡಲಾಗುತ್ತಿದೆ..
4. ಜಲಾಶಯಗಳ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಬಲಿತ ಬಿತ್ತನೆ ಮೀನು ಮರಿಗಳನ್ನು ಜಲಾಶಯಗಳಲ್ಲಿ ದಾಸ್ತಾನು ಮಾಡಲಾಗುತ್ತಿದೆ.
5. ಆಯ್ದ ಜಲಾಶಯಗಳಲ್ಲಿ ಪಂಜರಗಳಲ್ಲಿ ಮೀನು ಸಾಕಣೆಯನ್ನು (Cage Culture) ಮಾಡಲು ಪ್ರೋತ್ಸಾಹಿಸಲಾಗುತ್ತಿದೆ.
6. PMMSY ಅಡಿಯಲ್ಲಿ ಬಯೋಫ್ಲೋಕ್ (Biofloc) ಮತ್ತು RAS ಮೀನು ಕೃಷಿ ಪದ್ಧತಿಯ ಪರಿಚಯದಿಂದ ಮೀನು ಸಾಕಣೆ ವಿಧಾನದಲ್ಲಿ ಅರೆ ತೀವ್ರ ಮೀನು ಕೃಷಿಯಿಂದ ತೀವ್ರ ಮೀನು ಕೃಷಿ ಮಾಡಲು ಪ್ರೋತ್ಸಾಹಿಸಲಾಗಿದೆ.
7. PMMSY ಅಡಿಯಲ್ಲಿ ಶೀತಲೀಕೃತ ಸರಪಳಿ ಮೂಲಕ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸಿ ರೈತರು ಹೆಚ್ಚು ಮೀನು ಕೃಷಿಯನ್ನು ಕೈಗೊಳ್ಳುವಂತೆ ಮಾಡಲಾಗಿದೆ.
8. ಕರಾವಳಿಯಲ್ಲಿ ಚಿಕ್ಕ ಗಾತ್ರದ ಮೀನುಗಳನ್ನು ಹಿಡಿಯದಿರಲು ಹಾಗೂ ಬೆಳಕು ಮೀನುಗಾರಿಕೆ ಮತ್ತು ಬುಲ್ ಟ್ರಾಲಿಂಗ್ ಮೀನುಗಾರಿಕೆ ನಿಷೇಧ ಮಾಡಿರುವ ಕಾರಣ ಕರಾವಳಿ ಮೀನು ಹಿಡುವಳಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ.
9. ಮೀನುಗಾರಿಕೆ ಬಂದರು ಮತ್ತು ಫಿಶ್ ಲ್ಯಾಂಡಿಂಗ್ ಸೆಂಟರ್‌ಗಳ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದರ ಮೂಲಕ ಕರಾವಳಿಮೀನು ಉತ್ಪಾದನೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.
10. ವಿಕೇಂದ್ರೀಕರಣದ ಮೂಲಕ ತಳಮಟ್ಟದಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ.
11. ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ಮೀನು ಉತ್ಪಾದನೆಯ ಹಿಂದಿನ ಅನುಭವದ ಆಧಾರದ ಮೇಲೆ, ಜಲಮೂಲಗಳಲ್ಲಿ ಉತ್ಪಾದಕತೆ ಆಧಾರದ ಮೇಲೆ ಮೀನುಮರಿ ದಾಸ್ತಾನು ಪ್ರಮಾಣವನ್ನು ನಿರ್ಧರಿಸುವ ಅಧಿಕಾರವನ್ನು ನೀಡಲಾಗಿದೆ.

12. ಮೀನಿನ ಬದುಕುಳಿಯುವಿಕೆಯನ್ನು(Fish survival) ಮತ್ತು ಮೀನು ಹಿಡುವಳಿಯನ್ನು ಹೆಚ್ಚಿಸಲು ಮೀನುಗಾರಿಕೆ ನಿಷೇಧದ ಅವಧಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ ಮತ್ತು ಮೀನು ಹಿಡಿಯಲು ನಿರ್ಧಿಷ್ಟ ಬಲೆಯ ಆಯ್ಕೆಯನ್ನು ಜಾರಿಗೊಳಿಸಲಾಗಿದೆ ಹಾಗೂ ಸಣ್ಣ ಕಣ್ಣಿನ ಬಲೆಯನ್ನು (use of smaller Mesh size net) ಉಪಯೋಗಿಸುವುದನ್ನು ನಿಷೇಧಿಸಲಾಗಿದೆ.

13. ರಾಜ್ಯಾದ್ಯಂತ ಮೀನುಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಉದ್ಯಮಿಗಳಿಗೆ, ಯುವಕ, ಯುವತಿಯರಿಗೆ. ಮೀನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು 24/7 ಸಹಾಯವಾಣಿಯನ್ನು ಪರಿಚಯಿಸಲಾಗಿದೆ.

***